**O. S. No:224/2022**
**PW:1**

(ಇಂದು ದಿನಾಂಕಃ **02-06-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಶ್ರೀ ವಿ ಪಿ ಪಿ ವಕೀಲರಿಂದಃ**

ವಾದ ಪತ್ರದ 10 ಮತ್ತು 11 ನೇ ಖಂಡಿಕೆಯಲ್ಲಿ ತಿಳಿಸಿದಂತೆ ಆದ ಕುಟುಂಬ ಹೊಂದಾಣಿಕೆಗೆ ಸಂಬಂಧಿಸಿದ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ತಾನು ಹಾಜರು ಪಡಿಸಿರುವ ದಾಖಲಾತಿಗಳನ್ನು ತೋರಿಸಿ ಅದರಲ್ಲಿ ಸದರಿ ದಾಖಲಾತಿಯನ್ನು ಗುರುತಿಸುವಂತೆ ಕೇಳಿದಾಗ ನನಗೆ ಅಷ್ಟಾಗಿ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಕುಟುಂಬ ಹೊಂದಾಣಿಕೆ ಪತ್ರವನ್ನು ನಾನು ಹಾಜರು ಪಡಿಸದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಹೊಂದಾಣಿಕೆ ಪತ್ರ ಹಾಗೂ ಹಕ್ಕು ಬಿಡುಗಡೆ ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ರತ್ನವ್ವ ಹಾಗೂ ಸಾಕ್ಷಿದಾರರ ಸಹಿಗಳು ಇಲ್ಲ ಎಂದರೆ ಸರಿ. ನಾನು ಸದರಿ ದಾಖಲೆಗಳನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡು ನಿಪಿ-4 ರಂತೆ ಖೊಟ್ಟಿಯಾಗಿ ಹಕ್ಕು ಬದಲಾವಣೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

2. 2 ನೇ ಬಾರಿ ನಮ್ಮ ನಡುವೆ ಕುಟುಂಬ ಹೊಂದಾಣಿಕೆಯಾಗಿದೆ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಸದರಿ ಕುಟುಂಬ ಹೊಂದಾಣಿಕೆ ಪತ್ರವನ್ನು ನಾನು ಹಾಜರು ಪಡಿಸದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ತಾನು ಹಾಜರು ಪಡಿಸಿರುವ ದಾಖಲಾತಿಗಳನ್ನು ತೋರಿಸಿ ಅದರಲ್ಲಿ ಸದರಿ ದಾಖಲಾತಿಯನ್ನು ಗುರುತಿಸುವಂತೆ ಕೇಳಿದಾಗ ನನಗೆ ಅಷ್ಟಾಗಿ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಹಾಗೂ ರತ್ನವ್ವ ಪಾಲು ವಿಭಾಗ ಮಾಡಿಕೊಂಡ ಬಗ್ಗೆ ಪಾಲು ವಿಭಾಗ ಪತ್ರವನ್ನು ಹಾಜರು ಪಡಿಸಿರುತ್ತೇನೆ. ಸದರಿ ದಾಖಲೆ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿಯಾಗಿರುತ್ತದೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ರತ್ನವ್ವ ಹಾಗೂ ನನ್ನ ಪಾಲಿಗೆ ಬಂದ ಆಸ್ತಿಯ ವಿವರವನ್ನು ಕಾಣಿಸಿರುವುದಿಲ್ಲ. ಅದರೆ ಸಾಮೂಹಿಕವಾಗಿ ಎಂದು ಬರೆಯಲಾಗಿದೆ. ನನ್ನ ವಾದ ಪತ್ರದ 12 ನೇ ಖಂಡಿಕೆಯಲ್ಲಿ ನನ್ನ ಹಾಗೂ ರತ್ನವ್ವ ರವರಿಗೆ ತಲಾ ಅರ್ಧ ಹಿಸ್ಸೆ ಬಂದಿರುತ್ತದೆ ಎಂದು ಬರೆಸಿರುವುದಿಲ್ಲ. ಆದರೆ ಸಾಮೂಹಿಕವಾಗಿ ಎಂದು ಬರೆಸಿರುತ್ತೇನೆ. ಯಾವುದೇ ರೀತಿ ನೋಂದಾಯಿತ ಪಾಲು ವಿಭಾಗ ಪತ್ರ ಆಗಿರದ ಕಾರಣ ಅದನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ರತ್ನವ್ವರವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನು ಕ್ಷೇತ್ರ 4 ಎಕರೆ 25 ಗುಂಟೆ ಸಂಪೂರ್ಣ ಜಮೀನು ದಾವೆಯ ಆಸ್ತಿಯಾಗಿರುತ್ತದೆ. ನಾನು ಸದರಿ ಸಂಪೂರ್ಣ ಕ್ಷೇತ್ರಕ್ಕೆ ಸಂಬಂಧಿಸಿ ಪರಿಹಾರವನ್ನು ಕೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು

ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರತ್ನವ್ವ ರವರು ಮೃತಪಡುವವರೆಗೆ ಪ್ರತಿವಾದಿ ಹಾಗೂ ಆತನ ಮಕ್ಕಳು ಆಕೆಯ ಪಾಲನೆ ಪೋಷಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರತ್ನವ್ವ ರವರಿಗೆ ಜನೇವರಿ-2020 ರಿಂದ ಫೆಬ್ರುವರಿ-2020 ವರೆಗೆ ಅನಾರೋಗ್ಯವಾದಾಗ ಹಾಗೂ ಅವರಿಗೆ ಸರಿಯಾಗಿ ಪ್ರಜ್ಞೆ ಇರದೇ ಇರುವಾಗ ಪ್ರತಿವಾದಿ ಚಿಕಿತ್ಸೆ ಕೊಡಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವೇ ಚಿಕಿತ್ಸೆ ಕೊಡಿಸಿದ್ದು, ಸದರಿಯವರು ಆರೋಗ್ಯವಾಗಿದ್ದರು ಎಂದು ನುಡಿದಿರುತ್ತಾರೆ. ನಾನು ಖೊಟ್ಟಿಯಾಗಿ ನಿಪಿ-1 ನ್ನು ಸೃಷ್ಟಿಸಿಕೊಂಡು ಅದರ ಆಧಾರದ ಮೇಲೆ ನನ್ನ ಹೆಸರನ್ನು ದಾವಾ ಆಸ್ತಿಯಲ್ಲಿ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವರ್ಗಾವಣೆಯ ವಿಷಯ ಗೊತ್ತಾದ ನಂತರ ಪ್ರತಿವಾದಿ ಸಹಾಯಕ ಆಯುಕ್ತರು ಧಾರವಾಡ ರವರಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ನ್ಯಾಯಾಲಯದವರು ವರ್ಗಾವಣೆ ಆದೇಶವನ್ನು ರದ್ದು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮುಂದಿನ ನ್ಯಾಯಾಲಯಕ್ಕೆ ಹೋಗುವಂತೆ ತಿಳಿಸಿ ಆದೇಶ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆದೇಶ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದ 18 ನೇ ಖಂಡಿಕೆಯಲ್ಲಿ ಸಹಾಯ ಆಯುಕ್ತರು ಸದರಿ ವರ್ಗಾವಣೆಯನ್ನು ರದ್ದು ಪಡಿಸಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿಯವರ ಆದೇಶದ ವಿರುದ್ಧ ಜಿಲ್ಲಾಧಿಕಾರಿಗಳು, ಧಾರವಾಡರವರಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಜಿಲ್ಲಾಧಿಕಾರಿಗಳು ಮೇಲ್ಮನವಿಯನ್ನು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯದಲ್ಲಿ ಬರೆಹರಿಸಿಕೊಳ್ಳುವಂತೆ ತಿಳಿಸಿ ಆದೇಶ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಆದೇಶದ ಪ್ರಕಾರ ವರ್ಗಾವಣೆ ಆದೇಶವನ್ನು ರದ್ದು ಪಡಿಸಿ ರತ್ನವ್ವ ರವರ ಹೆಸರನ್ನು ಪುನಃ ದಾಖಲಿಸುವಂತೆ ಸಂಬಂಧಪಟ್ಟ ಇಲಾಖೆಗೆ ನಿರ್ದೇಶನ ನೀಡಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ರತ್ನವ್ವ ರವರ ಹೆಸರು ನಿಪಿ-50 ರಂತೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಅದೇ ರೀತಿ ರತ್ನವ್ವ ರವರ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲಾಗಿದೆ ಎಂದರೆ ಕಂದಾಯ ಇಲಾಖೆಯವರೊಂದಿಗೆ ಮೀಲಾಪಿಯಾಗಿ ಅವರ ಹೆಸರು ದಾಖಲಾಗುವಂತೆ ಮಾಡಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-50 ರ ವರ್ಗಾವಣೆಯನ್ನು ನಾನು ಪ್ರಶ್ನಿಸಿ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ.

3. ನಿಪಿ-1 ನ್ನು ಬರೆಯುವ ವೇಳೆ ನಾನು ಹಾಜರಿರಲಿಲ್ಲ. ಸದರಿ ದಾಖಲೆಯನ್ನು ನನಗೆ ನನ್ನ ತಾಯಿ ರತ್ನವ್ವ ರವರು ತೋರಿಸಿದ ಮೇರೆಗೆ ಗೊತ್ತಾಗಿರುತ್ತದೆ. ಕಾರಣ ನನಗೆ ಸದರಿ ದಾಖಲೆಯಲ್ಲಿರುವ ಅಂಶಗಳ ಬಗ್ಗೆ ಮಾಹಿತಿ ಇರುತ್ತದೆ. ನಿಪಿ-1 ರಲ್ಲಿ ಯಾವ ಭಾಗದ ಅರ್ಧ

ಹಿಸ್ಸೆ ಎಂದು ಹಾಗೂ ಅದರ ಕ್ಷೇತ್ರ ಹಾಗೂ ಚೆಕ್ಕುಬಂಧಿಯನ್ನು ನಮೂದಿಸಿರುವುದಿಲ್ಲ. ಆದರೆ ಸಂಪೂರ್ಣ ಜಮೀನಿನ ಚೆಕ್ಕುಬಂಧಿಯನ್ನು ಬರೆಯಲಾಗಿರುತ್ತದೆ. ಪ್ರತಿವಾದಿಗೆ ಮೋಸ ಮಾಡುವ ಗಡಿಬಿಡಿಯಲ್ಲಿ ನಿಪಿ-1 ರಲ್ಲಿ ಅರ್ಧ ಹಿಸ್ಸೆಯ ಕ್ಷೇತ್ರ ಹಾಗೂ ಚೆಕ್ಕುಬಂಧಿಯನ್ನು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿ ಅದನ್ನು ಬರೆಸಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ತಾಯಿ ನಿಪಿ-1 ನ್ನು ಬರೆಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ಬರೆಯುವ ವೇಳೆ ರತ್ನವ್ವ ರವರಿಗೆ ಸರಿಯಾಗಿ ಕಣ್ಣು ಕಾಣಿಸುತ್ತಿರಲಿಲ್ಲ, ಕಿವಿ ಕೇಳಿಸುತ್ತಿರಲಿಲ್ಲ ಹಾಗೂ ನಡೆದಾಡಲು ಆಗುತ್ತೀರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ರತ್ನವ್ವ ರವರ ಸಹಿ ಖೊಟ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ಮೂಲ ದಾವಾ ಸಂಃ 149/2018 ರಲ್ಲಿಯ ರತ್ನವ್ವ ರವರ ಸಹಿಗೂ ಹಾಗೂ ನಿಪಿ-1 ರಲ್ಲಿರುವ ರತ್ನವ್ವ ರವರ ಸಹಿಗೂ ಸಾಕಷ್ಟು ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ-25 ರಲ್ಲಿಯ ರತ್ನವ್ವ ರವರ ಸಹಿಗೂ ಹಾಗೂ ನಿಪಿ-1 ರಲ್ಲಿರುವ ರತ್ನವ್ವ ರವರ ಸಹಿಗೂ ಸಾಕಷ್ಟು ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಿಪಿ-1 ರ 1ನೇ ಪುಟದ ಹಿಂಬದಿಲ್ಲಿರುವ ರತ್ನವ್ವ ರವರ ಸಹಿಗಳಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ನಿಪಿ-1 ನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-25 ರಲ್ಲಿ ನಮೂದಿರುವ ಪ್ರಭು ಹಂಡಿಯವರು ಈಗ ಜೀವಂತವಿದ್ದಾರೆ. ನಿಪಿ-25 ರ ಮೇಲೆ ನಾನು ಸರಿಯಾದ ರೀತಿಯ ಮುದ್ರಾಂಕ ಶುಲ್ಕವನ್ನು ನ್ಯಾಯಾಲಯಕ್ಕೆ ಭರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

4. ನಾನು ಹಾಜರು ಪಡಿಸಿರುವ ನಿಪಿ-13, 16 ಮತ್ತು 18 ರಲ್ಲಿ ನನ್ನ ಜನ್ಮ ದಿನಾಂಕಗಳಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಿಪಿ-24 ರಲ್ಲಿ ರಾಮಚಂದ್ರಪ್ಪ ವೀರೂಪಾಕ್ಷಪ್ಪ ಬಡಿಗೇರ ರವರ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಸದರಿ ಮನೆಯಲ್ಲಿ ವಾಸವಿದ್ದೇವೆ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ರಾಮಚಂದ್ರಪ್ಪ ರವರ ವಾರಸುದಾರರು ಸದರಿ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ನಿಪಿ-19, 21 ಮತ್ತು 22 ಖೊಟ್ಟಿ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ನಿಪಿ-25 ನ್ನು ಬರೆದುಕೊಡಲು ನನಗೆ ಅಧಿಕಾರವಿರಲಿಲ್ಲ ಹಾಗೂ ನಾವು ಆಗ ಸದರಿ ಆಸ್ತಿಯ ಕಬ್ಜಾದಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-25 ನ್ನು ಪ್ರಕರಣಕ್ಕೆ ಅನುಕೂಲವಾಗಲು ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-33 ರಿಂದ 45 ಗಳನ್ನು ಪ್ರಕರಣಕ್ಕೆ ಅನುಕೂಲವಾಗಲು ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-33 ರಲ್ಲಿ ಕುಂಕುಮ ಇಟ್ಟಿರುವುದನ್ನು ನಾನು ಚಿಕ್ಕವಳಿದ್ದಾಗ ಮಾಡಿರುತ್ತೇನೆ. ನನಗೆ ವಾಹನ ಚಲಾಯಿಸಲು ಪರವಾನಗೆ ಇಲ್ಲ. ನಿಪಿ-40 ನ್ನು ಪ್ರಕರಣಕ್ಕೆ ಅನುಕೂಲವಾಗಲು ನಾನೇ ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ

ಯಾವುದೇ ರೀತಿ ಹಕ್ಕು ಅಧಿಕಾರ ಇರದೇ ಇದ್ದರೂ ಸಹ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯ ಮನೆತನಕ್ಕೆ ಸಂಬಂಧಿಸಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ತಾತ್ಕಾಲಿಕ ತಡೆಯಾಜ್ಞೆಯ ಅರ್ಜಿ ರೂ. 300/- ದಂಡದೊಂದಿಗೆ ವಜಾ ಆಗಿದ್ದು, ಅದನ್ನೂ ಸಹ ನಾನು ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆದೇಶದ ವಿರುದ್ಧ ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿ ಸಹ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಈಗಲೂ ಸಹ ಪ್ರತಿವಾದಿ, ಆತನ ಸಹೋದರ ಹಾಗೂ ಮಕ್ಕಳ ಕಬ್ಜಾದಲ್ಲಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**